International Journal of Kannada Research
www.kannadajournal.com

ISSN: 2454–5813
IJKR 2023; 9(3): 145-148
© 2023 IJKR
www.kannadajournal.com
Received: 02-05-2023
Accepted: 09-06-2023

**Dr. R Nagesh**
Guest Faculty, Department of Kannada, Post graduation Centre, University Evening College, University of Mysore, Mysuru, Karnataka, India

**Jyothi T**
Guest Faculty, Department of Kannada, Post Graduation Centre, University Evening College, University of Mysore, Mysuru, Karnataka, India

**Ramesh**
Guest Faculty, Department of Kannada, Post Graduation Centre, University Evening College, University of Mysore, Mysuru, Karnataka, India

**Corresponding Author:**
**Dr. R Nagesh**
Guest Faculty, Department of Kannada, Post graduation Centre, University Evening College, University of Mysore, Mysuru, Karnataka, India

# ಅಂಬಿಗರ ಚೌಡಯ್ಯನ ವಚನಗಳಲ್ಲಿ ಡಾಂಭಿಕತೆಯ ನೋಟ

**Dr. R Nagesh, Jyothi T and Ramesh**

**ಪೀಠಿಕೆ**

ವಚನ ಸಾಹಿತ್ಯದ ಕ್ರಾಂತಿ ಎಂದಿಗೂ ಅಮೂಲ್ಯವಾದುದು. ಅಂದಿನಿಂದ ಇಂದಿನವರೆಗೆ ವಚನ ಸಾಹಿತ್ಯವನ್ನು ಕುರಿತು ಚರ್ಚೆ, ಸಂವಾದ, ಸಂಶೋಧನೆಗಳು, ಸಮಾವೇಶಗಳು ನಡೆಯುತ್ತಾ ಅವುಗಳನ್ನು ಮರುಶೋಧಿಸುವ ನಿರಂತರ ಪ್ರಕ್ರಿಯೆ ನಡೆಯುತ್ತಿವೆ. ವಚನ ಸಾಹಿತ್ಯದ ಮುಂಚೂಣಿಯಲ್ಲಿ ಕೆಲವರು ನಿಲ್ಲುವುದಾದರೆ ಇನ್ನು ಹಲವಾರು ಮತ್ತು ಮಹತ್ವದ ವಚನಕಾರರು ಹಿನ್ನೆಲೆಯಲ್ಲಿ ಉಳಿದಿದ್ದಾರೆ. ಕಾಯಕ ನಿಷ್ಠೆಯೊಂದಿಗೆ, ಕುಲಕಾಯಕದೊಂದಿಗೆ ಆತ್ಮತೃಪ್ತಿಯನ್ನು ಕಂಡಿರುವ ಹಲವು ವಚನಕಾರರನ್ನು ನೆನಪಿಸಿಕೊಳ್ಳಬೇಕಾಗಿದೆ. ಯಾವುದೇ ವಚನವು ಮೇಲ್ನೋಟಕ್ಕೆ ಲೋಕದೃಷ್ಟಿಯ ಪ್ರಜ್ಞೆಯೊಳಗೆ ಮಾತಾಡಿದರೂ ಅದರ ಹಿನ್ನೆಲೆಯಲ್ಲಿ ಹಲವು ಅರ್ಥಗಳು ಸಿಗುತ್ತದೆ.
ಕನ್ನಡ ನಾಡಿನ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನದ ಸಂಕ್ರಮಣದ ಕಾಲ. ಸಾಂಸ್ಕೃತಿಕ, ಧಾರ್ಮಿಕ, ಸಾಹಿತ್ಯ ಪರಿವರ್ತನೆಯ ಈ ಯುಗವನ್ನು ಪ್ರತಿ ಸಂಸ್ಕೃತಿಯ ನಿರ್ಮಾಣ ಕಾಲಘಟ್ಟ ಎನ್ನಬಹುದು. ಜಾತಿ, ವರ್ಣ, ವರ್ಗ, ಲಿಂಗಗಳ ತಾರತಮ್ಯವನ್ನು ಬದಿಗೊತ್ತಿ ಶಿವಶಕ್ತಿ ಶರಣ ಪರಿಕಲ್ಪನೆಗಳ ಮೂಲಕ ಉಪನಿಷತ್ತಿನ ತಾತ್ವಿಕತೆ ಪುನರುಜ್ಜೀವನಗೊಂಡ ಯುಗವಿದು. ವಚನ ಎಂಬ ವಿಶಿಷ್ಟ ಸಾಹಿತ್ಯದ ಪ್ರಕಾರದ ಮೂಲಕ ಅನುಭವ ಮತ್ತು ಅನುಭಾವಿಕ ಸಮನ್ವಯದ ಅಭಿವ್ಯಕ್ತಿ ರೂಪುಗೊಂಡಿತು.
ಅಂಬಿಗರ ಚೌಡಯ್ಯನ ಹುಟ್ಟೂರು ಹಾವೇರಿ ಜಿಲ್ಲೆಯ ರಾಣಿ ಬೆನ್ನೂರಿನ ಚೌಡದಾನಪುರ ಇವನ ಕಾಲ ಸುಮಾರು ಕ್ರಿ.ಶ. 1160 ಸುಮಾರು 280 ವಚನಗಳು ಇವನವೆಂಬ ಗುರುತಿಸಲ್ಪಟ್ಟಿವೆ. ಅವನೇ ಹೇಳಿಕೊಂಡಿರುವಂತೆ ಅವನು "ನ್ಯಾಯ, ನಿಷ್ಠುರ, ದಾಕ್ಷಿಣ್ಯ ವಿರನಲ್ಲದ ಪೊಳ್ಳು ಲೋಕ ವಿರೋಧಿ ಶರಣ, ಯಾರಿಗೂ ಅಂಜಿದವನಲ್ಲ ದಿಟ್ಟ, ಅಂಬಿಗರ ಚೌಡಯ್ಯ" ಇದು ಅವನ ಹೆಗ್ಗಳಿಕೆ ಅಲ್ಲ. ಅವನ ವಚನಗಳೇ ಇದಕ್ಕೆ ಸಾಕ್ಷಿಯಾಗಿದೆ. ಮೊನಚಾದ ವ್ಯಂಗ್ಯ, ವಿಡಂಬನೆ, ಚಿಕಿತ್ಸಕ ದೃಷ್ಟಿ, ವಸ್ತುನಿಷ್ಠತೆ, ನಿಷ್ಠುರ, ನೇರನುಡಿ ಚೌಡಯ್ಯನ ವಚನಗಳ ವೈಶಿಷ್ಟ್ಯಗಳಾಗಿವೆ.
ಅರಿವು ತಿಳುವಳಿಕೆಯನ್ನು ಅಂಬಿಗರ ಚೌಡಯ್ಯ ಪರಿಭಾವಿಸುವುದು ಮತ್ತು ಕಟಕಿಯಾಗಿ ಚುಚ್ಚುವಂತೆ ಮಾತನಾಡಿರುವುದನ್ನು ತನ್ನ ವಚನಗಳಲ್ಲಿ ಹೇಗೆ ವ್ಯಕ್ತಪಡಿಸುತ್ತಾನೆ ನೋಡಿ.

> ಅರಿಯದ ಗುರು ಅರಿಯದ ಶಿಷ್ಯಂಗೆ
> ಅನುಗ್ರಾಹ ಮಾಡಿದಡೇನಪ್ಪುವದೆಲವೊ
> ಅಂಧಕನ ಕೈಯನಂದಕ ಹಿಡಿದಡೆ ಮುಂದನಾರು ಕಾಬರು
> ಹೇಳಲೆ ಮರಳೆ

ಈ ವಚನವು ಒಂದು ಕಾಲಧರ್ಮವನ್ನು ಸೂಚಿಸುತ್ತದೆಯಾದರೂ ಎಲ್ಲಾ ಕಾಲಕ್ಕೂ ಅನ್ವಯಿಸುವ ವಚನದ ಸಾಲು 'ಅನುಗ್ರಹ' ಎಂದು ವಿಶೇಷವಾಗಿ ಬಳಕೆಯಾಗಿರುವ ಪದವು ಹಲವು ವಿಶೇಷಣವನ್ನು ಪಡೆಯುತ್ತದೆ. ಶ್ರೇಣೀಕೃತ ವ್ಯವಸ್ಥೆಯೊಳಗೆ ಗುರು ಮತ್ತು ಶಿಷ್ಯ ಪರಂಪರೆಯ ಇತಿಹಾಸ ಬಹಳ ದೊಡ್ಡದಿದೆ. ಈ ಪರಂಪರೆಯೊಳಗೆ ಇಬ್ಬರು ನಿರ್ವಹಿಸಬೇಕಾದ ಜಾಗೃತ ಪ್ರಜ್ಞೆಯನ್ನು ನೆನಪಿಸುತ್ತಾನೆ. ಅಂದರೆ ಗುರು ಕೇವಲ ಬೋಧ ಪ್ರಧಾನವಾದುದಲ್ಲ. ಗುರು ಎಂದು ಪರಿಯೋಚಿಸುವ ಜ್ಞಾನ ಸಂಪತ್ತಿನ ನಿರ್ವಹಣೆ ಮತ್ತು ಅದನ್ನು ತಲುಪಿಸುವ ಮಾರ್ಗ ಸೂತ್ರಗಳ ನಿರ್ಭೀತಿಯನ್ನು ಪ್ರಸ್ತಾಪಿಸುತ್ತಾನೆ. ತಾನು ಕಲಿತುದುದು ಮತ್ತು ನಾನು ಕಲಿಸುವುದು ಕಾಲ ಗುಣಗ್ರಾಹಿತ್ಯದ ಜೊತೆಗೆ ಇಬ್ಬರ ಜವಾಬ್ದಾರಿಯನ್ನು ಬಹಳ ಎಚ್ಚರದಿಂದ ಹೇಳುವ ವಚನಕಾರನ ಜಾಣ್ಮೆಯಾಗಿದೆ.

ಕಣ್ಣು ಕಾಣದ ಅಂಧಕನಿಗೆ ಹೋಲಿಸುವ ಸ್ಥಿತಿ ದಾರಿ ಸಿಗದೇ ಇರುವ ಸೂಚಕತೆ, ಜ್ಞಾನಧಾರೆ ಎರೆಯುವವರು ಮುಂದಿನವರನ್ನು ಸರಿಯಾದ ಗುರಿ ಮಾರ್ಗವನ್ನು ತೋರಬೇಕು. ಇಲ್ಲವೇ ಮೂರ್ಖನ ಸ್ಥಿತಿ ಬರುತ್ತದೆ. ಇದು ತನಗೆ ತಾನೇ ದಡ್ಡನಾಗುವ, ಮೂರ್ಖನಾಗುವ ಸ್ಥಿತಿಯನ್ನು ನಾಚುವಂತೆ ಮುಂದುವರೆಸುತ್ತಾರೆ. ಮುಂದಿನ ಸವಾಲುಗಳನ್ನು ಎದುರಿಸುವಷ್ಟು ನಮ್ಮ ಜ್ಞಾನ ಶಾಖಾ ಗುರುಪರಂಪರೆ ಕೊಡದೇ ಇದ್ದಾಗ ಅದು ಹರಿಯುವ ತೊರೆಯಲ್ಲ. ಮುಳುಗಿ ಹೋಗುತ್ತಿರುವುದನ್ನು ಈಜು ಬಾರದ, ಈಜಲರಿಯದವ ಹೇಗೆ ಮುಳುಗಿದವನನ್ನು ಬದುಕಿಸಿಯನು ಮತ್ತು ತಾನು ಬದುಕಿ ಬಂದಾನು ಎನ್ನುವ ಪ್ರಶ್ನೆ ಹಲವು ಒಳವುಗಳನ್ನು ಸೂಚಿಸುತ್ತದೆ. ಜೀವನವೇ ಸದಾ ಹೋರಾಟವಾಗಿರುವಾಗ ಅಂಬಿಗರ ಚೌಡಯ್ಯ ಕೆರೆ, ತೊರೆ, ಗುರು ಇವೆಲ್ಲವೂ 'ಪ್ರತಿಮೆ' ಯಲ್ಲಿಯೇ ಹಿಡಿದಿಟ್ಟಿರುವುದು ಕಾಲದ ಎಚ್ಚರಿಕೆಯನ್ನು ಸೂಚಿಸುತ್ತಿದ್ದಾನೆ.

ಆಯಾಯ ಕಾಲದ ತಿಳುವಳಿಕೆಯ ಧಾರಣೆಯ ನಿರಂತರವಾಗಿ ರೂಪಿಸುವ ಕಲೆ ಹರಿಯುತ್ತಿರುವ ನದಿಯಂತೆ ಎಲ್ಲಾ ಜ್ಞಾನಧಾರೆಗಳನ್ನು ಒಳಗೊಳ್ಳಬೇಕೆಂಬುವ ಛೀಪ್ಸೆಯಿಂದ ಮತ್ತು ಸಮಾಜದ ದುಸ್ಥಿತಿಯನ್ನು ಮೀರುವ ಸಲುವಾಗಿ ಇರುವ ಪರ್ಯಾಯದ ದಾರಿಯನ್ನು ಕಂಡುಕೊಳ್ಳುವುದನ್ನು ಹಲವು ವಚನಕಾರರು ಗುರುತಿಸುವುದು ಕಾಣಬಹುದು. ಅರ್ಚನೆ ನೇಮದಲ್ಲಿಯೂ ಅಂಬಿಗರ ಚೌಡಯ್ಯ ಅರಿಷಡ್ವರ್ಗದಲ್ಲಿ ಒಂದಾದ ಆವೇಶ ದೈಹಿಕ ಮತ್ತು ಮಾನಸಿಕ ನಿವೇದನೆಗಳ ಪಲ್ಲಟಗಳ ಅರಿವು ಇಲ್ಲದೆ ಮಾಡಿದಲ್ಲಿ ತಾನು ಮಾಡುವ ಅರ್ಚನೆ ಎಂಥಹುದು ಎನ್ನುವುದರ ಬಗ್ಗೆ ಎಚ್ಚರವನ್ನು ಸೂಚಿಸುತ್ತದೆ. ಹಾಗಾಗಿ ಅರ್ಚನೆ ಮಾಡುವಲ್ಲಿ ಆವೇಶ ಅರಿತಿರಬೇಕು. ಪೂಜೆ ಮಾಡುವಲ್ಲಿ ಪುಣ್ಯಮೂರ್ತಿಯಾಗಿರಬೇಕು. ಇದು ಆಗ್ರಹ ಪೂರ್ವಕದಂತೆ ಕಂಡರೂ ಪೂಜೆ ಮಾಡುವಲ್ಲಿ ತೋರಬೇಕಾದ ದೈಹಿಕ ಜಾಣ್ಮೆತನವನ್ನು ಪ್ರಸ್ತಾಪಿಸಿದ್ದಾರೆ.

ಅಂಬಿಗರ ಚೌಡಯ್ಯನು ಡಾಂಭಿಕತನವನ್ನು ಕಟುಮಾತುಗಳಲ್ಲಿ ವಿಡಂಬಿಸಿದ್ದಾನೆ. ಡಾಂಭಿಕತನ ಮಾತಿನಲ್ಲಿ ನಡೆಯಲ್ಲಿ ವೇಷದಲ್ಲಿ ವೈಚಾರಿಕತೆಯನ್ನು ಸತ್ಯತೆಯನ್ನು ತಿಳಿಸುತ್ತಾನೆ. ಶರಣರ ಚಳುವಳಿ ಸಂದರ್ಭದಲ್ಲಿ ವೇಷಡಂಭಕರಿದ್ದರು. ಹೊಟ್ಟೆ ಹೊರೆಯುವ ಮಾರ್ಗವಾಗಿ ಅವರು ಜಂಗಮ ಶರಣ, ಶಿವಭಕ್ತರ ವೇಷ ಧರಿಸುತ್ತಿದ್ದರು. ಅಂತಹವರನ್ನು ಸಮರ್ಥಿಸುವ ಮಂದಿಯೂ ಇದ್ದರೂ ಇವರೆಲ್ಲರಿಗೆ ಚಪ್ಪಲಿಯಲ್ಲಿ ಟೊಕಟೊಕನೆ ಹೊಡೆಯಬೇಕು ಎಂದು ಆಕ್ರೋಶ ಹೊರಹಾಕುತ್ತಾನೆ.

ಕಂಥ ತೊಟ್ಟವ ಗುರುವಲ್ಲ ಕಾವಿ ಹೊತ್ತವ ಜಂಗಮನಲ್ಲ
ಶೀಲ ಕಟ್ಟಿದವ ಶಿವಭಕ್ತನಲ್ಲ ನೀರು ತೀರ್ಥವಲ್ಲ
ಕೂಳು ಪ್ರಸಾದವಲ್ಲ, ಹೌದೆಂಬವನ ಬಾಯಿ ಮೇಲೆ
ಅರ್ಥಮಣದ ಪಾದರಕ್ಷೆಯ ತೆಗೆದುಕೊಂಡು ಮಾಸಿ ಕಡಿಮೆ ಇಲ್ಲದೆ ತೂಗಿ
ಟೊಕಟೊಕನೆ ಹೊಡೆ ಎಂದಾತ ನಮ್ಮ ಅಂಬಿಗರ ಚೌಡಯ್ಯ

ಗುರುವಾದವನಿಗೆ ಅರಿವಿರಬೇಕು. ಶಿಷ್ಯನಾಗುವನ ಅಂತಃಸತ್ಯ ಮತ್ತು ಅಂತಸ್ಥಗಳನ್ನು ತಿಳಿಯದೆ ದೀಕ್ಷೆ ನೀಡಿದರೆ ಅಂಧಕನ ಕೈಯಿ ಅಂಧಕ ಹಿಡಿದಂತೆ ತೊರೆಯಲ್ಲಿ ಮುಳುಗುತ್ತಿರುವವನ್ನು ಈಜು ಬಾರದವನು ತೆಗೆಯಲು ಉದ್ಯುಕ್ತವಾದಂತೆ ಎಂದು ತಿಳಿಸಿದ್ದಾನೆ. ಗುರು–ಶಿಷ್ಯ ಸಂಬಂಧ ಗುರುವಿನ ಗುರುತ್ವ ಇತ್ಯಾದಿಗಳ ಕುರಿತು ಸೂಚಿಸುವ ವಚನ ಗುರುವಿನ ವೇಷದ ಛಾಯೆ ವಿಡಂಬಿಸಿದೆ.

ಅಂಬಿಗ ಜಗದೊಳಗೆ ಇಂಬಿಲೋಲಾಡುವನು
ತುಂಬಿದ ಸಾಗರದೊಳಗೆ ನೋಡಯ್ಯ
ನಿಂದ ದೋಣಿಯನೇರಿದಂದಿನ ಹುಟ್ಟಿ
ಕಾಡವಿರಂದದನಾರಿಂದಾತ ತೊಳಸುತ್ತಿದ್ದನು

ಈ ಅಂಬಿಗನ ವೃತ್ತಿಕಾಯವು ಸುಲಭವಾದುದಲ್ಲ. ಅಷ್ಟೇ ಜವಾಬ್ದಾರಿಯಿಂದ ಕೂಡಿದ್ದುದು. ತುಂಬಿದ ಸಾಗರದ ಮೇಲೆ ಲೋಲಾಡುವ ಪರಿ ಯಾವ ವಿದ್ಯೆಗೂ ಸಮವಲ್ಲ. ತನ್ನನ್ನೇ ನಂಬಿದ ಗುರುವಿನ ರೀತಿಯಲ್ಲಿ ದಡ ಸೇರಿಸುವ ಕಾಯಕವನ್ನು ಶಿವನಿಷ್ಠೆಂಬ ತತ್ವದಡಿಯಲ್ಲಿ ಯೋಚಿಸುವ ಪರಿಯು ಅನನ್ಯವಾದುದು ಎಂದು ಹೇಳುವ ಅಂಬಿಗರ ಚೌಡಯ್ಯ ತನ್ನ ಸುತ್ತಲಿನ ಲೌಕಿಕ ಪ್ರಪಂಚವನ್ನು ಮರು ಪ್ರಶ್ನಿಸುವ ಅವನ ಜಾಣ್ಮೆ ಲಿಂಗ ಜಂಗಮವನ್ನು ಅರಿಯುವುದೇ ಆಗಿದೆ. ಅಂಬಿಗ ಚೌಡಯ್ಯನ ಜಾತ್ಯತೀತತೆ ದೇಹದ ಶಕ್ತಿ ಅಡಗಿರುವುದು ಎಲ್ಲಾ ಜಾತಿಯ ಕಾಯಕ ನಿಷ್ಠೆಯೊಳಗಿನ ಮನುಷ್ಯನದು ಎಂದು ಹೇಳುತ್ತಾನೆ.

ಅಡವಿಯ ತೊಪ್ಪಲ ತಂದು ತಿಂದು ಒಡಲು ದಂಡಿಸಿಕೊಂಡು
ಪಡೆ, ಗವಿಯೊಳಗೆ ತಪಸ್ಸಿದ್ದೇವೆಯ ಕಡು ಹೆಮ್ಮೆಯಲ್ಲಿ ನುಡಿವ
ಅಣ್ಣಗಳು ನೀವು ಕೇಳಿರೋ
ಷಡುರಸಂಗಳು ಹುಟ್ಟಿದವು ಶಿವನ ಕರುಣರನಿದಲ್ಲಿ ಆ ರುಚಿಗಳ ಸುಖಮಂ ಪಡುವುದಕ್ಕೆ
ಹೊನ್ನು ಹೆಣ್ಣು ಮಣ್ಣೆಂಬ ತ್ರಿವಿಧ ಪದಾರ್ಥವ ಹಿಡಿದ ಭಕ್ತನ ಮನೆಯಲ್ಲಿ
ಗುರುಲಿಂಗಜಂಗಮಕ್ಕೆ ನೀಡಿ ಮಾಡುವ ಭಕ್ತಿ ಪದಾರ್ಥವಾದ ಆಡುರುಚಿಯ ಕೊಂಬುದಕ್ಕೆ
ನಿಮ್ಮಲ್ಲಿ ಷಡ್ಡದಲಿಂಗಣಗಳುಂಟು ಅದನೋಡಿ ಎಚ್ಚತ ಸವಿಸವಿದಸೇತುಬಲ್ಲಡೆ ಮಹಾಮಹಿಮ
ತಾನೇನು ಮಾಡಲು ಜಡನಲ್ಲ ಅಜಡನು ತಾನೆಂದಾತ ನಂಬಿಗರ ಚೌಡಯ್ಯ

ಅಂಬಿಗರ ಚೌಡಯ್ಯ ಬಹಳ ಸರಳವಾದ ಈ ವಚನದಲ್ಲಿ ನೇರವಾಗಿ ಒಡಲದಂಡನೆಯೆಂದು ತಪಸ್ಸನ್ನು ಟೀಕಿಸುತ್ತಾನೆ. ಶಿವನ ಕರುಣೆಯಾದ ಇಹದ ಬದುಕನ್ನು ಅನುಭವಿಸಬೇಕೆಂದು ಕರೆಕೊಟ್ಟಿದ್ದಾನೆ. ಹೊನ್ನು, ಹೆಣ್ಣು, ಮಣ್ಣುಗಳನ್ನು ಮಾಹೆ ಎಂದು ನಿರಾಕರಿಸುವ ವೈದಿಕ ವೈರಾಗ್ಯ ಚಿಂತನೆಗೆ ವಿರುದ್ಧವಾಗಿ ಪದಾರ್ಥವಾದಿ ಚಿಂತನೆಯಿದು, ಭಕ್ತಿಯನ್ನು ಪದಾರ್ಥವಾದದ ನೆಲೆಯಲ್ಲಿ ಮಾಡಬೇಕು ಎನ್ನುತ್ತಾನೆ. ಲೌಕಿಕವಾದ ಬದುಕನ್ನು ಪೂರ್ತಿಯಾಗಿ ಅಪ್ಪಿಕೊಳ್ಳಬೇಕೆಂಬ ನಿಲುವು ಇಲ್ಲಿ ಕಂಡುಬರುತ್ತದೆ. ಕಮಲಪತ್ರದ ಮೇಲಿನ ನೀರಿನಂತೆ ಈ ಸಂಸಾರದಲ್ಲಿರಬೇಕು ಎಂಬ ವಚನೇತರ ಸಂಸ್ಕೃತಿಯ ನಿಲುವಿಗೂ ಅಂಬಿಗರ ಚೌಡಯ್ಯ ಧೋರಣೆಗೂ ಇರುವ ಭಿನ್ನತೆಯನ್ನು ಗಮನಿಸಬೇಕು. ಅವನು ಲೌಕಿಕ ಬದುಕನ್ನು ಸವಿಯಿರಿ ಎಂದಷ್ಟೇ ಹೇಳದೆ 'ಸವಿಸವಿದು ಅರ್ಪಿಸಿ' ಎಂದು ಸವಿಯುವುದಕ್ಕೆ ಒತ್ತು ನೀಡಿರುವುದು ಗಮನಾರ್ಹ. ವೈರಾಗ್ಯಕ್ಕೆ ಶಿವನು ಜಡನಲ್ಲ ಅವನು ಅಜಡನು ಎಂಬ ಪದಾರ್ಥವಾದಿ ಬಂಡಾಯ ನಿಲುವು ಚೌಡಯ್ಯನದಾಗಿದೆ.

ಕಲ್ಲುನಾಗರ ಕಂಡರೆ ಹಾಲು ಹೊಯ್ಯೆಂಬರು
ಬದುಕಿನ ನಾಗರಿ ಕಂಡರೆ ಕೊಲ್ಲೆಂಬರು
ಎಂಟು ದೇವರು ಬಂದದೆ ಇಲ್ಲವೆಂದಟ್ಟುವರು
ಉಣ್ಣದ ಕಲ್ಲು ಪ್ರತಿಮೆಯ ಮುಂದಿಟ್ಟು ಉಣ್ಣೆಂಬರು
ಇಂತಹ ವೇಷದಡಂಬ ತೊತ್ತಿಂಗೆ
ವಿಚಾರಿಸಿದೆ ಲಿಂಗದ ಕೊಡಲಾಗದೆಂದಾತನಂಬಿಗ ಚೌಡಯ್ಯ

ಅಂಬಿಗರ ಚೌಡಯ್ಯನು ಈ ವಚನದಲ್ಲಿ ಡಾಂಭಿಕ ಆಚರಣೆಗಳನ್ನು ಪ್ರಶ್ನಿಸಿದ್ದಾನೆ. ಬಸವಣ್ಣನವರ 'ಕಲ್ಲುನಾಗರ ಕಂಡರೆ ಹಾಲನೆರೆ ಎಂಬರು' ವಚನವನ್ನು ನೆನಪಿಸುವ ಈ ವಚನ ಅದೇ ಆಶಯವನ್ನು ಹೊಂದಿದೆ. ಆಚರಣೆಗಳ ಹಿಂದಿರುವ ತಾತ್ವಿಕತೆಗಳನ್ನು ಅರ್ಥೈಸಿದೆ. ಆಚರಿಸುವುದು ಪ್ರದರ್ಶನ ಮಾತ್ರ. ಅದು ದರ್ಶನವಲ್ಲ. ದರ್ಶನಕ್ಕೆ ಪ್ರದರ್ಶನ ಹಂಗು ಬೇಕಿಲ್ಲ. ಇದು ವಸ್ತು ಡಾಂಭಿಕತೆ ಡಾಂಭಿಕ ಭಕ್ತಿ ಎಂಬ ನಿಲುವು ಚೌಡಯ್ಯನದು

ಅಂತರಂಗದ ಬಿಟ್ಟುಮಂಡೆ ಬೋಳಾದ ಮೇಲೆ
ಅಂಗಕ್ಕೆ ಚೆಂದವುಂಟೆ ಅಲಂಕಾರವುಂಟೆ
ತಮ್ಮಂಗಿದ ಸಂಗವನರಿಯದೆ ಭಂಡರನೇನೆಂಬೆನೆಂದಾತ
ನಮ್ಮ ದಿಟ್ಟ ವೀರಾಧಿವೀರ
ನಿಜಭಕ್ತ ಅಂಬಿಗರ ಚೌಡಯ್ಯನು

ತನ್ನ ಮನುಸಾಕ್ಷಿ ಮತ್ತು ಆತ್ಮಲಿಂಗವನ್ನು ಮುಚ್ಚಿಸಿ ಹೊರಗೆ ಅನ್ಯರಿಗೆ ಮೆಚ್ಚಿಸುವ ಮಂಡೆ ಬೋಳಿಸಿ ನಂಬಿಸುವ ಆಡಂಬರದ ಯಾವ ಅಲಂಕಾರವನ್ನು ಶೋಭಿಸುತ್ತದೆ. ದೈಹಿಕ ಮತ್ತು ಹೊರಗಿನ ಕಪಟತೆಯನ್ನು ಸೂಕ್ಷ್ಮವನ್ನು ಭಂಡರು ಎಂದು ಚುಚ್ಚಿ ಮಾತನಾಡುತ್ತಾನೆ. ದಾಸರೂ ಕೂಡ 'ಚಿತ್ತ' ದ ಸ್ಥಿತಿಯನ್ನು ಒಂದು ಕಡೆ ಗುಡಿಯನ್ನು ಸುತ್ತಿದಾಗ ಅದು ವ್ಯರ್ಥವಾಗುತ್ತದೆಂಬುದನ್ನು ಹೇಳಿದ್ದಾನೆ. ದೇವನೊಲಿಸಿಕೊಳ್ಳುವುದಕ್ಕೆ ಆಕಾರ, ವಸ್ತು ಮತ್ತು ಮನೋವಿಕಾರಗಳು ದೈಹಿಕ ವಿಕಾರಗಳು ಬೇಡ ಎಂಬುದನ್ನು ಪರೋಕ್ಷವಾಗಿಯೇ ಅಂತಹ ಭಕ್ತಗಣಕ್ಕೆ 'ಭಂಡರು' ಎಂದು ಹೇಳಿರುವುದು ತನ್ನ ಧೈರ್ಯದಿಂದಲೇ.
ದೇವಾಲಯಗಳು ವಾಣಿಜ್ಯಕರಣಗೊಳ್ಳುತ್ತಿರುವಲ್ಲಿ ಆಕಾಶ, ಭೂಮಿಗಳ ಮೇಲೆ ಅಪಾರವಾದ ನಂಬಿಕೆ ಹುಟ್ಟಿಸಿ ಪುರಾಣ ಹೆಣೆದು ತಮಗೆ ಅನುಕೂಲ ಬರುವಂತೆ ಶೂದ್ರಕುಲವನ್ನು ತಮ್ಮ ಅಂಕೆಯಲ್ಲಿಟ್ಟುಕೊಳ್ಳುವ ಜನ ತಮ್ಮ ಅರಿಷಡ್ವರ್ಗಗಳನ್ನು ಮೀರದೆ ತಮ್ಮ ಕಾಯದ ತುಂಬ ದ್ವೇಷವನ್ನು ತುಂಬಿಕೊಂಡಿರುವ ಇವರು ಶಿವನ ನಿಜನೆಲೆಯನರಿಯದೇ ಮಾಡುವ ಯಾವ ಆಡಂಬರದ ಅನೀತಿ ಕೆಲಸಗಳು ತುಂಬಿದ ಗುಹೆಯೊಳಗೆ ಹಂದಿ ಒದ್ದಾಡುವ ಹಾಗೆ ಆಯಿತು. ಎಂದು ಉಪಮೆಯನ್ನು ಕೊಟ್ಟಿರುವುದು ಇದಕ್ಕೆ ಸಾಕ್ಷಿಯಾಗಿದೆ. ವಾರ, ದಿನ, ಭವಿಷ್ಯ, ಜ್ಯೋತಿಷ್ಯಗಳ ಮೇಲೆ ಇಡೀ ಮನುಷ್ಯನ ನಂಬಿಕೆಗಳನ್ನು ಸೃಷ್ಟಿಸಿ ತನ್ನ ಕಾರ್ಯಸಾಧುತನವನ್ನು ಮಾಡಿಕೊಂಡಿರುವ ಜನ ಕಲಿಯುವುದು ಎಂದು ತನ್ನೊಳಗೆ ಬಂಡಾಯ ಮನಸ್ಥಿತಿಯನ್ನು ಹೊರಹಾಕುತ್ತಾನೆ. ಅಡ್ಡಪಲ್ಲಕ್ಕಿಗಳ ಮೇಲೆ ಕೂತು ಮರೆದಾಡುವ ವಿರಕ್ತರು. ಎದುರಿಗೆ ಬಂದವರೆಲ್ಲ ತನ್ನ ಪಾದದಡಿಗೆ ಅಡ್ಡ ಬಿದ್ದು ಆಶೀರ್ವಾದ ಪಡೆಯುವ ಮಂದಿಯನ್ನೇ ಅಂಬಿಗರ ಚೌಡಯ್ಯ 'ಚಾಟಿ' ಏಟಿನಂತೆ ಛೇಡಿಸುತ್ತಾನೆ. ಏನೇನೋ ಅರಿಯದ ಎಡ್ಡ ಮಾನವರಿಗೆ ಉಪದೇಶದ ಮಾಡುವ ಗೊಡ್ಡ ಮಾನವರ ಮುಖದ ತೋರದಿರಯ್ಯಾ' ಎಂಬ ಮಾತು ಮಠದೊಳಗಿನ ಸ್ವಾಮೀಜಿ ಮತ್ತು ಭಕ್ತರನ್ನೇ ಉದ್ದಣಿಸಿ ಹೇಳಿದ್ದಾನೆ. ತನ್ನಲ್ಲಿ ಜ್ಞಾನವುಂಟು ಎಂದು ನಂಬಿಸುವ ಗುರು. ಇವನಲ್ಲಿ ಜ್ಞಾನವಿದೆ ಎಂದು ನಂಟುವ ದಡ್ಡ ಭಕ್ತ ಇಬ್ಬರನ್ನು ಮೂಕ ಪ್ರಾಣಿಗಳ ಹೋಲಿಕೆ ತನ್ನ ಸ್ವಂತ ಶಕ್ತಿ ಇಲ್ಲ ಎಂಬುದನ್ನು ಹೋಲಿಸಿರುವುದು ಔಚಿತ್ಯವೆನಿಸಿದೆ. ಇಂತಹವರು ಇಹಲೋಕದ ಪರಲೋಕಕ್ಕೂ ಸಲ್ಲದವರಾಗುತ್ತಾರೆ ಎನ್ನುತ್ತಾನೆ.

'ಅರಿಕೆ ಬಿತ್ತಿದ ಗಿಡುವಿನ ಹೂವ ಕೊಯಿದು
ಊರೆಲ್ಲರೂ ಕಟ್ಟಿಸಿದ ಕೆರೆಯನೀರ ತಂದು
ನಾಡೆಲ್ಲರೂ ನೋಡಿಯೆಂದು ಪೂಜಿಸುತ್ತ
ಪೂಜಿಸಿದ ಪುಣ್ಯ ಹೂವಿಗೋ? ನೀರಿಗೋ?
ನಾಡೆಲ್ಲಕ್ಕೂ? ಪೂಜಿಸಿದಾತಗೋ?
ಇದನಾನರಿಯೇ, ನೀ ಹೇಳದಂನಂಬಿಗ ಚೌಡಯ್ಯ'

ಅಂಬಿಗರ ಚೌಡಯ್ಯ ಸಾಂಸ್ಥಿಕ ಆರಾಧನೆಯನ್ನು ಅಲ್ಲಗಳೆಯುತ್ತಾನೆ. ಅಂತಹವರನ್ನು ಲೊಟ್ಟೆ ಮೂಳರು ಎಂದು ಜರೆಯುತ್ತಾನೆ. ಅವನ ದೃಷ್ಟಿಯಲ್ಲಿ ಆಚಾರ ಶುದ್ಧಿ, ಭಾವಶುದ್ಧಿ, ಮನಃಶುದ್ಧಿ ಇರಬೇಕು. ಕಾಯ ಶುದ್ಧಿಯೆ ಭ್ರಮೆ ಇರಬಾರದು ಕಾಯ ಶುದ್ಧಿಯೇ ಶ್ರೇಷ್ಟವೆನ್ನುವವರನ್ನು ವಿಡಂಬಿಸುತ್ತಾನೆ.

ಈಶ ಲಾಂಛನವ ತೊಟ್ಟು ಮನ್ಮಥ ವೇಷ ಲಾಂಛನದ ತೊಡಲೇತಕ್ಕೆ
ಇದು ನಿಮ್ಮ ನುಡಿ–ನಡೆಗೆ ನಾಚಿಕೆಯಿಲ್ಲವೇ?
ಅದು ಘನಲಿಂಗದ ಮೆಚ್ಚಲ್ಲ ಎಂದನಂಬಿಗ ಚೌಡಯ್ಯ/

ಅನ್ಯ ಸಮಯವನ್ನು ಟೀಕಿಸುವುದಕ್ಕಿಂತಲೂ ಸ್ವಾಮತೀಯರನ್ನು ಪಾಥಿಕರನ್ನು ಪ್ರಶ್ನಿಸುವ ನೈತಿಕ ಧೈರ್ಯ ಹೆಚ್ಚಿರಬೇಕು. ಚೌಡಯ್ಯನಲ್ಲಿ ಅಂತಹ ಸ್ಥೈರ್ಯವನ್ನು ಕಾಣುತ್ತೇನೆ. ಶಿವ ಭಕ್ತರ ವೇಷಧಾರಿಗಳನ್ನು ಟೀಕಿಸಿದ್ದಾನೆ. ಪರೋಪದೇಶ ಪಾಂಡಿತ್ಯ ಮಾತಿನ ಡಾಂಭಿಕತೆ ಹಲವರಲ್ಲಿ ಕಂಡುಬರುವ ರೋಗ ಅದನ್ನು ಅಂಬಿಗ ಚೌಡಯ್ಯ ವಿಮರ್ಶಿಸಿದ್ದಾನೆ.

ಮಾತುಗಂಟಿತನದಿಂದ ಎಷ್ಟು ಮಾತನಾಡಿದರೇನು
ಕಾಮಿನಿಯರ ಕಾಲದೆಸೆ ಸಿಕ್ಕಿ
ಕ್ರೋಧದ ದಳ್ಳುರಿಯಲ್ಲಿ ಬೆಂದು ಆಸೆಯೆಂಬ ಪಾಶ ಕೊರಳಲ್ಲಿ ಸುತ್ತಿ
ಅದೇಕೋ ಅದೇತರ ಮಾತೆಂದನಂಬಿಗ ಚೌಡಯ್ಯ

ವಾಚಾಳತನವೆಂದರೆ ಅತಿ ಮಾತು ಆಪಾಡಾಂಭಿಕ ಮಾತಿಗೆ ಹೊಂದಿ ಕೊಳ್ಳಲಾರದು. ಆದ್ದರಿಂದ ಚೌಡಯ್ಯ ಮಾತಿನ ಡಾಂಭಿಕತೆಗೆ ಮಾತುಗಂಟಿತನ ಎಂದು ಬಳಸಿದ್ದಾನೆ. ಅರಿಷಡ್ವರ್ಗಗಳನ್ನು ಗೆಲ್ಲದೆ ಪರರಿಗೆ ಉಪದೇಶ ಮಾಡುವುದು ಮಾತುಗಂಟಿತನವೇ ಹೊರತು ಅರಿವಲ್ಲ. ಅರಿವಿಲ್ಲದೆ ಶಿವಮಾರ್ಗ ಕಾಣಿಸದು ಇದು ಅಂಬಿಗರ ಚೌಡಯ್ಯನ ನಿಲುವು ಎನ್ನಬಹುದು.

ಜಾತಿಭ್ರಮೆ, ನೀತಿಭ್ರಮೆ ಎಂಬ ಕರ್ಮಂಗಳನ್ನು ಘಾತಿಸಿ ಕಳೆಯಬಲ್ಲಡಾತ
ಕ್ಷೇತ್ರಭ್ರಮೆ, ತೀರ್ಥಭ್ರಮೆ, ಪಾಷಾಣಭ್ರಮೆ ಎಂಬ ಕರ್ಮಂಗಳನು
ನೀಕರಿಸಿ ಕಳೆಯ ಬಲ್ಲಡಾತಯೋಗಿ ಲೋಕಕ್ಕಂಜಿ ಲೌಕಿಕದ ಮರೆಗೊಂಡ ನಡೆವಾತ
ಲೋಕಯೋಗಿ ಎಂದಾತನಂಬಿಗ ಚೌಡಯ್ಯ

ಇಲ್ಲ ಲೌಕಿಕವನ್ನು ಮರೆಯಬಾರದೆಂಬ ಧ್ವನಿಯಿದೆ. ಲೌಕಿಕವಿಲ್ಲದೆ ಪರಲೌಕಿಕವಿಲ್ಲ. ಭ್ರಮೆಗಳನ್ನು ಬಿಟ್ಟು ಬದುಕಬೇಕಾದ ಅವಶ್ಯಕತೆಯನ್ನು ಒತ್ತಿ ಹೇಳಿರುವುದನ್ನು ಅಂಬಿಗರ ಚೌಡಯ್ಯ ಮತ್ತೆ ಮತ್ತೆ ಜಾತಿಯ ವಿಷ ಬೀಜದ ಬಗ್ಗೆ ಒಳಗೆ ಮತ್ತು ಹೊರಗೆ ಇರುವ ಭಿನ್ನತೆಯ ಚೌಕಟ್ಟನ್ನು ಪ್ರಶ್ನಿಸುತ್ತಲೇ ಒಂದು ಸಮುದಾಯವನ್ನು ಹೊರಗೆ ಹಾಕಿದವರ ಹುನ್ನಾರವನ್ನು ಬಯಲಿಗೆಳೆಯುತ್ತಲೇ 'ಹೊಲೆಯ' ಎಂಬುದು ಒಂದು ಜಾತಿ ಸೂಚಕವಲ್ಲವೆಂಬುದಕ್ಕೆ 'ತಾಯಿಗೆ ಬೈದವನೇ ಹೊಲೆಯ' ಎಂಬ ಸಮಜಾಯಿಷಿ ಕೊಡುತ್ತಾನೆ. 'ಹೊಲೆಯ' ಮುಖ್ಯವಾಗಿ ಭೂಮಿಗೆ, ಹೊಲೆಯ ಒಡೆಯನಾಗಿರುತ್ತಾನೆ ಎಂಬ ಅರ್ಥವಿದೆ. ತಂದೆ, ತಾಯಿಗೆ ಎದುರಾಡಿದವನೆ ಹೊಲೆಯ ಎಂಬ ನುಡಿ ಸತ್ಯದಲ್ಲಿ

ಚೌಡಯ್ಯನು ತನ್ನ ವಿಶ್ಲೇಷಣೆಯ ಪರಿವಯನ್ನು ಬದಲಾಯಿಸಿದ್ದಾನೆ. ಮೇಲ್ವರ್ಗದವರು ವಿಂಗಡಿಸುವ ಜಾತಿ–ವಿಜಾತಿಗಳ ಅಂಕೆಯನ್ನರಿದು ಅಜ್ಞಾನ, ತಮ್ಮ ಹೊಟ್ಟೆ ಹೊರೆಯುವ ಕ್ಷಣಿಕ ಆಸೆಗೆ ಮಾಡುವ ದೂರ್ತ ಕೆಲಸಗಳ ಮಾಡಿದವನೇ ಹೊಲೆಯ ಎಂದ ನಿರ್ಧಾರಿತಕ್ಕೆ ಬರುವ ಚೌಡಯ್ಯನ ವಚನಗಳು ಲೋಕದೃಷ್ಟಿಯನ್ನು ತಿದ್ದುವ ಮತ್ತು ಸಾಮಾಜಿಕ ಜಾತಿಸ್ತರಗಳನ್ನು ಮೀರುವ ಯೋಚನೆ ಮಾಡುತ್ತಾನೆ.

ಹೀಗೆ ಶ್ರೇಣಿಯುತ ಜಾತಿ ಸಮಾಜದೊಳಗಡೆ ಬದುಕುತ್ತಿರುವ ಈ ಕಾಲದಲ್ಲಿ ನಿಜಶರಣ ಅಂಬಿಗರ ಚೌಡಯ್ಯನ ವಚನಗಳು ಮತ್ತೆ ಮರು ಅಧ್ಯಯನಕ್ಕೆ ಒಳಪಡಿಸುವ ಮತ್ತೆ ಇವನ ಲೋಕದೃಷ್ಟಿ, ವಿಡಂಬನೆ, ಪ್ರತಿಭಟನೆ, ಹಾಗೂ ಸಮಾಜ ಸುಧಾರಣೆಯು ದೃಷ್ಟಿಯೂ ಎಲ್ಲಾ ಕಾಲಕ್ಕೂ ಮಾದರಿಯಾದುದೇ. ಆದರೆ ವಚನಕಾರರನ್ನು ಜಾತಿ ಪಟ್ಟಿಯಿಂದ ಬಿಡಿಸಿ ತರಬೇಕಾದುದು ಈ ಕಾಲದ ಅನಿವಾರ್ಯವಾಗಿದೆ. ಅಂಬಿಗರ ಚೌಡಯ್ಯನು ಡಾಂಭಿಕತೆಗಳನ್ನು ನೇರಾನೇರ ಪ್ರಶ್ನಿಸುವುದನ್ನು ಕಾಣುತ್ತೇವೆ. ಅವನ ವಚನಗಳಲ್ಲಿ ಸಮಾಜವನ್ನು ತಿದ್ದುವ ಆಸಕ್ತಿ ಇರುವಂತೆಯೇ ಸ್ವಮತೀಯರನ್ನು ತೀಡುವ ಮನೋಧರ್ಮ ಕಾಣಬಹುದು. ಸಾತ್ವಿಕ ಆಕ್ರೋಶದಿಂದ ಆಚರಣೆಗಳ ಬಾಹ್ಯಾಡಂಬರಗಳ ವಿರುದ್ಧ ಧ್ವನಿ ಎತ್ತುವುದನ್ನು ಕಾಣುತ್ತೇವೆ. ಆಚರಣೆಗಳಗಿಂತ ಅನುಷ್ಠಾನ ಮುಖ್ಯ ಎಂಬ ನಿಲುವು ಅವನಲ್ಲಿ ಕಾಣುತ್ತೇವೆ. ಅವನ ಪ್ರಖರ ವೈಚಾರಿಕತೆ, ನಿಷ್ಠುರ ನುಡಿಗಳು ವಚನಕಾರರಲ್ಲಿ ಅವನನ್ನೇ ಅನನ್ಯವಾಗಿಸಿವೆ ಎನ್ನಬಹುದು.

## ಗ್ರಂಥಋಣ


1. ವಚನ ಸಂಸ್ಕೃತಿ ಸಮಾಜಿಕ ಆಯಾಮಗಳು, ಡಾ.ಟಿ.ಆರ್. ಚಂದ್ರಶೇಖರ, ೨೦೦೪, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು
೨. ಸಂಕೀರ್ಣ ವಚನ ಸಂಪುಟ 1, ೧೯೯೩, ಸಂ. ಡಾ.ಎಂ.ಎಂ. ಕಲಬುರ್ಗಿ
೩. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು